ಎಲೆಗಳು, ಕಾಂಡ, ಅವುಗಳ ಉದ್ದ, ಗಾತ್ರ, ಆಕಾರಗಳಿಗೂ ಪ್ರಾಮುಖ್ಯತೆ ಕೊಡುತ್ತದೆ. ಇವುಗಳನ್ನು ಕೆಲವು ನಿಯಮಗಳಿಗೆ ಅನುಸಾರವಾಗಿ ಜೋಡಿಸಲಾಗುತ್ತದೆ. ಇಕೆಬಾನ ವಿಧಾನದ ಹೂ ಜೋಡಣೆಗೆ ಬಹಳ ಕಡಿಮೆ ಸ್ಥಳಾವಕಾಶ, ಕನಿಷ್ಠ ಒಂದು ಅಥವಾ ಎರಡು ಹೂಗಳಷ್ಟೇ ಸಾಕು. ಅವುಗಳ ಜೊತೆ ಮೂರು ಕವಲುಗಳುಳ್ಳ ಒಂದು ರೆಂಬೆಯನ್ನು ಜೋಡಿಸಲಾಗುತ್ತದೆ. ಈ ಕವಲುಗಳು ಬೇರೆ, ಬೇರೆ ಎತ್ತರಗಳನ್ನು ಹೊಂದಿರುತ್ತವೆ. ಇಕೆಬಾನ ಕಲಾ ಶಾಲೆಯ ಒಂದು ಶಾಖೆಯ ನಂಬಿಕೆಯಂತೆ, ಈ ಕವಲುಗಳು ಸ್ವರ್ಗ, ಭೂಮಿ ಹಾಗೂ ಮಾನವನನ್ನು ಪ್ರತಿನಿಧಿಸುತ್ತವೆ. ಮತ್ತೊಂದು ಶಾಖೆಯ ಅಭಿಪ್ರಾಯದಂತೆ ಇವು ಸೂರ್ಯ, ಚಂದ್ರ ಮತ್ತು ಮಾನವನ ಸಂಕೇತಗಳಾಗಿವೆ.

ಇಕೆಬಾನ ಹೂಗಳ ಜೋಡಣೆಯನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಲು 3 ರಿಂದ 5 ವರ್ಷಗಳು ಅಗತ್ಯ. ಬದಲಾಗುತ್ತಿರುವ ಅಭಿರುಚಿಗಳಿಗೆ ಅನುಗುಣವಾಗಿ ಇಕೆಬಾನದಲ್ಲಿ ವಿವಿಧ ರೀತಿಯ ಹೂ ಜೋಡಣೆಯನ್ನು ಕಲಿಸಲು ಬೇರೆ ಬೇರೆ ಶೈಲಿಯ ಕಲಾಶಾಲೆಗಳು ಪ್ರಾರಂಭವಾಗಿವೆ. ಅವುಗಳಲ್ಲಿ ಪ್ರಮುಖವಾದವೆಂದರೆ–





ರಿಕ್ಕಾ ಶೈಲಿ, ಸೀಕಾ ಅಥವಾ ಶೋಕಾ ಶೈಲಿ, ನಾಗಿರೇ ಶೈಲಿ, ಮೋರಿಬಾನಾ ಶೈಲಿ ಮತ್ತು ಜಿಯುಕಾ ಶೈಲಿ.

ರಿಕ್ಕಾ ಶೈಲಿಯಲ್ಲಿ ಹೂಗಳನ್ನು ಚಿಕ್ಕ ಬಾಯಿಯುಳ್ಳ ಹೂ ಪಾತ್ರೆಯಲ್ಲಿ ನೇರವಾಗಿ ನಿಲ್ಲಿಸಲಾಗುತ್ತದೆ. ಸೀಕಾ ಅಥವಾ ಶೋಕಾ ಶೈಲಿಯಲ್ಲಿ ಜೀವಂತ ಹೂಗಳನ್ನಷ್ಟೇ ಬಳಸಲಾಗುತ್ತದೆ. ನಾಗಿರೇ ಶೈಲಿಯಲ್ಲಿ ಹೂಗಳನ್ನು ತಟ್ಟೆಯಾಕಾರದ ಹೂ ಪಾತ್ರೆಯಲ್ಲಿ ಜೋಡಿಸಲಾಗುತ್ತದೆ. ಮೋರಿಬಾನಾ ಶೈಲಿಯಲ್ಲಿ ಹೂಗಳ ಸಂಖ್ಯೆಗೆ ಮಿತಿ ಇರುವುದಿಲ್ಲ. ಹಾಗೆಯೇ ಜಿಯುಕಾ ಶೈಲಿಯಲ್ಲಿ ಜೋಡಣೆಯಲ್ಲಿ ಸಸ್ಯದ ಎಲ್ಲ ಭಾಗಗಳನ್ನೂ ಬಳಸಲಾಗುತ್ತದೆ.

ಇಕೆಬಾನವನ್ನು ಕಲಿಯುವಾಗ ಸಂಪೂರ್ಣ ಪರಿಸರ ನಿಶ್ಶಬ್ದವಾಗಿರಬೇಕು. ಇದರಿಂದ ಏಕಾಗ್ರತೆ ಹಾಗೂ ತಾಳ್ಮೆ ಹೆಚ್ಚುತ್ತದೆ. ಪ್ರಕೃತಿ ಹಾಗೂ ಮಾನವನ ನಡುವಿನ ಸಂಬಂಧ ಮತ್ತಷ್ಟು ಗಾಢವಾಗುತ್ತದೆ.